# ಬೋಧಕ ಮತ್ತು ವಿನಯ



❁ ಅಭಿಮಾನ ಹೋಯಿತು ಎಂದರೆ ಎಲ್ಲ ಸರಿಹೋಗುತ್ತದೆ. 'ನಾನು ಉಪನ್ಯಾಸ ಮಾಡುತ್ತೇನೆ, ನೀವು ಕೇಳಿ' ಎಂಬ ಈ ಅಭಿಮಾನ ಇಲ್ಲದೆ ಇದ್ದರೆ ಯಾವ ತೊಂದರೆಯೂ ಬರದು. ಅಹಂಕಾರ ಜ್ಞಾನಜನ್ಯವಾದುದೊ ಅಜ್ಞಾನಜನ್ಯವಾದುದೊ? ಯಾರು ನಿರಹಂಕಾರಿಯೊ ಆತನಿಗೆ ಮಾತ್ರವೇ ಜ್ಞಾನ ಲಭಿಸುತ್ತದೆ. ಮಳೆಯ ನೀರು ತಗ್ಗುಪ್ರದೇಶದಲ್ಲಿ ಶೇಖರವಾಗುತ್ತದೆ; ಎತ್ತರ ಪ್ರದೇಶದಿಂದ ಕೆಳಕ್ಕೆ ಹರಿದು ಬಂದುಬಿಡುತ್ತದೆ.

❁ ಎಲ್ಲಿಯವರೆಗೆ ಅಹಂಕಾರವಿರುವುದೊ ಅಲ್ಲಿಯವರೆಗೆ ಜ್ಞಾನ ದೊರಕದು; ಈ ಸಂಸಾರಕ್ಕೆ ಮತ್ತೆ ಮತ್ತೆ ಹಿಂದಿರುಗಿ ಬರಬೇಕಾಗುತ್ತದೆ. ಹಸುವಿನ ಕರು, 'ಹಂಬಾ! ಹಂಬಾ!' ಅಂದರೆ, 'ನಾನು! ನಾನು!' ಅನ್ನುತ್ತದೆ. ಅದಕ್ಕಾಗಿಯೆ ಅದಕ್ಕೆ ಕಾದಿದೆ ಅಷ್ಟೊಂದು ಚಿತ್ರಹಿಂಸೆ. ಕಟುಕ ಅದನ್ನು ಕೊಲ್ಲುತ್ತಾನೆ. ಅದರ ಚರ್ಮದಿಂದ ಮೆಟ್ಟು ಆಗುತ್ತದೆ. ನಗಾರಿಯ ಮತ್ತು ಡೋಲಿನ ಬಾಯಿಮುಚ್ಚಳ ಆಗುತ್ತದೆ. ಅದನ್ನು ಜನ ದಯದಾಕ್ಷಿಣ್ಯವಿಲ್ಲದೆ ಸುಮ್ಮನೆ ಬಡಿಯುತ್ತಾರೆ. ಅದರ ಕಷ್ಟ ಅಷ್ಟಕ್ಕೇ ಮುಗಿಯೋ ಹಾಗಿಲ್ಲ. ಕಟ್ಟಕಡೆಗೆ ಅದರ ಕರುಳಿನಿಂದ ಹುರಿಯಾಗುತ್ತದೆ. ಆ ಹುರಿಯಿಂದ ಹತ್ತಿ ಎಕ್ಕುವ ಯಂತ್ರವನ್ನು ತಯಾರು ಮಾಡುತ್ತಾರೆ. ಆ ಯಂತ್ರದಿಂದ ಹತ್ತಿಯನ್ನು ಎಕ್ಕುವಾಗ ಆ ಹುರಿ ಯಾವಾಗ 'ತುಹ್ಹೂ! ತುಹ್ಹೂ!' ಅಂದರೆ, 'ನೀನು! ನೀನು!' ಎಂದು ಹೇಳಲು ಆರಂಭಿಸುವುದೊ ಆಗ ಅದಕ್ಕೆ ಬಿಡುಗಡೆ. ಬಳಿಕ ಅದು ಎಂದಿಗೂ 'ಹಂಬಾ! ಹಂಬಾ!' ಎಂದು ಹೇಳದು. 'ನೀನು! ನೀನು!' ಎಂದೇ ಹೇಳುತ್ತದೆ. ಅಂದರೆ, 'ಹೇ ಭಗವಂತ, ನೀನು ಕರ್ತ, ನಾನು ಅಕರ್ತ; ನೀನು ಯಂತ್ರಿ, ನಾನು ಯಂತ್ರ; ಸಮಸ್ತವೂ ನೀನೇ' ಅಂತ.

❁ ಇವು ಮೂರು ಪದಗಳು —'ಗುರು', 'ತಂದೆ', 'ಕರ್ತ' — ಮಾತು ಎತ್ತಿದರೇ ನನಗೆ ಮುಳ್ಳು ಚುಚ್ಚಿದ ಹಾಗೆ ಅನುಭವ. ನಾನು ಆತನ ಮಗು, ಎಂದೆಂದಿಗೂ ಬಾಲಕನೆ. ಹೀಗಿರುವಲ್ಲಿ ನಾನು ಯಾವ ರೀತಿಯಾಗಿ ತಂದೆ ಆಗಬಲ್ಲೆ? ಭಗವಂತನೇ ಕರ್ತ, ನಾನು ಅಕರ್ತ; ಆತ ಯಂತ್ರಿ, ನಾನು ಯಂತ್ರ ಮಾತ್ರ.

❁ ಯಾರಾದರೂ ನನ್ನನ್ನು, 'ಗುರು!' ಎಂದು ಸಂಬೋಧಿಸಿದರೆ ನಾನು ಉತ್ತರವೀಯುತ್ತೇನೆ, 'ತಿಳಿಗೇಡಿ, ದೂರ ಸರಿ! ಹೇಗೆ ನಾನು ಗುರು?' ಎಂದು. ಸಚ್ಚಿದಾನಂದನೊಬ್ಬನನ್ನು ಬಿಟ್ಟರೆ ಬೇರೆ ಯಾರೂ ಗುರು ಎಂಬುವರೇ ಇಲ್ಲ. ಆತನ ವಿನಾ ಬೇರೆ ಯಾವ ಆಸರೆಯೂ ಇಲ್ಲ, ಕೇವಲ ಆತ ಮಾತ್ರನೇ ಈ ಭವಸಾಗರದ ಅಂಬಿಗ.

❁ ಆಚಾರ್ಯಗಿರಿ ಕೆಲಸ ಬಹಳ ಕಠಿಣವಾದದ್ದು. ಅದರಿಂದ ಆಚಾರ್ಯನಿಗೇ ಹಾನಿಯುಂಟಾಗುತ್ತದೆ. ಒಂದು ಹತ್ತಾರು ಜನ ಗೌರವಿಸುವುದನ್ನು ನೋಡಿ, ಕಾಲಿನ ಮೇಲೆ ಕಾಲು ಹಾಕಿಕೊಂಡು ಹೇಳುತ್ತಾನೆ, 'ನಾನು ಉಪದೇಶ ಮಾಡುತ್ತೇನೆ, ನೀವೆಲ್ಲ ಕೇಳಿ' ಎಂದು. ಈ ಭಾವ ಬಹಳ ಕೆಟ್ಟದ್ದು. ಆತನಿಗೆ ನಿಜವಾಗಿ ದೊರೆಯುವುದು ಒಂದಷ್ಟು ಗೌರವ ಮಾತ್ರ! ಅತಿ ಹೆಚ್ಚೆಂದರೆ ಜನ ಹೇಳುತ್ತಾರೆ, 'ಆಹ! ವಿಜಯಬಾಬು ಬಹಳ ಚೆನ್ನಾಗಿ ಮಾತನಾಡುತ್ತಾನೆ; ಒಳ್ಳೆ ಜ್ಞಾನಿ' ಅಂತ. 'ನಾನು ಉಪದೇಶ ಮಾಡುತ್ತೇನೆ' ಎಂಬ ಭಾವನೆ ನಿನಗೆ ಎಂದಿಗೂ ಬಾರದೆ ಇರಲಿ. ನಾನು 'ಹೇ ತಾಯಿ! ನೀನು ಯಂತ್ರಿ, ನಾನು ಯಂತ್ರ; ನೀನು ಮಾಡಿಸಿದಂತೆ ಮಾಡುತ್ತೇನೆ, ನುಡಿಸಿದಂತೆ ನುಡಿಯುತ್ತೇನೆ' ಎಂದು ತಾಯಿಗೆ ಹೇಳುತ್ತೇನೆ.

❁ ಎಲ್ಲಿಯವರೆಗೆ 'ನಾನು', 'ನೀನು' ಎಂಬ ಭಾವನೆ ಇರುವುದೊ, ಎಲ್ಲಿಯವರೆಗೆ 'ನಾನು ಪ್ರಾರ್ಥನೆ ಅಥವಾ ಧ್ಯಾನ ಮಾಡುತ್ತೇನೆ' ಎಂಬ ಭಾವನೆ ಇರುವುದೊ, ಅಲ್ಲಿಯವರೆಗೆ 'ನೀನು (ಭಗವಂತ) ಪ್ರಾರ್ಥನೆ ಕೇಳುತ್ತೀಯೆ ಎಂಬ ಭಾವನೆಯೂ ಇರುತ್ತದೆ, ಭಗವಂತ ಒಬ್ಬ ವ್ಯಕ್ತಿ ಎಂಬ ಬೋಧೆಯಿರುತ್ತದೆ, 'ನೀನು ಪ್ರಭು, ನಾನು ದಾಸ, ನೀನು ಪೂರ್ಣ, ನಾನು ಅಂಶ; ನೀನು ತಾಯಿ, ನಾನು ಮಗು' ಎಂಬ ಬೋಧೆ ಇರುತ್ತದೆ. ಆಗ ಈ ಭೇದಬೋಧೆ — ನಾನು ಪ್ರತ್ಯೇಕ ನೀನು ಪ್ರತ್ಯೇಕ ಎಂಬುದು — ಇದ್ದೇ ಇರುತ್ತದೆ. ಈ ಭೇದ ಬೋಧೆಯನ್ನು ಆತನೇ ನಿಮ್ಮ ಕೈಯಿಂದ ಮಾಡಿಸುತ್ತಾನೆ. ಅದಕ್ಕಾಗಿಯೆ ಗಂಡಸು ಹೆಂಗಸು, ಬೆಳಕು ಕತ್ತಲೆ, ಇವೇ ಮೊದಲಾದವುಗಳ ಬೋಧೆ ಆಗುತ್ತಿರುವುದು. ಎಲ್ಲಿಯವರೆಗೆ ಈ ಭೇದ ಬೋಧೆ ಇರುವುದೊ, ಅಲ್ಲಿಯವರೆಗೆ ಶಕ್ತಿಯನ್ನು (ಸಾಕಾರವನ್ನು) ಒಪ್ಪಬೇಕು. ಆತನು ನಮ್ಮ ಅಂತರ್ಯದಲ್ಲೇ 'ನಾನು' ಎಂಬುದನ್ನು ಇಟ್ಟುಬಿಟ್ಟಿದ್ದಾನೆ. ಎಷ್ಟೇ ವಿಚಾರ ಮಾಡಿದರೂ, ಸಾವಿರ ಬಾರಿ — 'ನಾನು' ಎಂಬುದು ಹೋಗದು. ಅದು ಹೋಗುವ ತನಕ ಆತ ವ್ಯಕ್ತಿರೂಪದಿಂದ ತೋರಿಸಿಕೊಳ್ಳುತ್ತಾನೆ.

❁ ಅದಕ್ಕಾಗಿಯೆ ಎಲ್ಲಿಯವರೆಗೆ 'ನಾನು' ಎಂಬುದು ಇರುವುದೊ, ಭೇದಬುದ್ಧಿ ಇರುವುದೊ, — ಬ್ರಹ್ಮನನ್ನು ನಿರ್ಗುಣ ಎಂದು ಹೇಳುವ ಹಾಗಿಲ್ಲ. ಅದು ಇರುವವರೆಗೆ ಸಗುಣಬ್ರಹ್ಮನನ್ನು ಒಪ್ಪಿಕೊಳ್ಳಬೇಕು, ಈ ಸಗುಣಬ್ರಹ್ಮನನ್ನೇ ವೇದ ಪುರಾಣ ಶಾಸ್ತ್ರಗಳು, 'ಕಾಳಿ ಅಥವಾ ಆದ್ಯಾಶಕ್ತಿ' ಎಂದು ಕರೆದಿವೆ.

ಶ್ರೀರಾಮಕೃಷ್ಣ ವಚನವೇದದಿಂದ